# ಶ್ರೀ ತು ಳ ಸೀ ಸ್ತೋ ತ್ರ

Contributed By Sri B.Ramanath



ತುಳಸೀ ಶ್ರೀ ಸಖಿ ಶುಭೇ ಪಾಪಹಾರಿಣಿ ಪುಣ್ಯದೇ ।
ನಮಸ್ತೇ ನಾರದನುತೇ ನಾರಾಯಣ ಮನಃಪ್ರಿಯೇ ॥

ಲಕ್ಷ್ಮೀದೇವಿಯ ಸಖಿ ಎನಿಸಿದವಳೆ, ಮಂಗಳಕರಳೇ, ಪಾಪವನ್ನು ನಾಶಪಡಿಸುವವಳೇ, ಪುಣ್ಯಕರಳೇ, ನಾರದರಿಂದ ಪೂಜಿತಳೇ, ನಾರಾಯಣನಿಗೆ ಪ್ರೀತಿಪಾತ್ರಳೇ, ಹೇ ತುಳಸಿ, ನಿನಗೆ ನಮ್ಮ ವಂದನೆಗಳು.

## ತು ಳ ಸಿ ಯ ಹಿ ನ್ನ ಲೆ

ಸಮುದ್ರಮಥನಕಾಲದಲ್ಲಿ ಶ್ರೀಹರಿಯು ಧನ್ವಂತ್ರಿರೂಪವನ್ನು ತಾಳಿ, ಕೈಯಲ್ಲಿ ಅಮೃತದಿಂದ ತುಂಬಿದ ಸುವರ್ಣ ಕಲಶವನ್ನು ಧರಿಸಿ, ಪ್ರಾದುರ್ಭವಿಸು–ತ್ತಾನೆ. ಆಗ ವೈದ್ಯರೂಪೀ ಶ್ರೀಧನ್ವಂತ್ರಿಯ ಕಣ್ಣಿನಿಂದ ಆನಂದಾಶ್ರುಗಳು ಉದುರಿದವು. ಆ ನೇತ್ರ ಬಿಂದುಗಳಿಂದ ತುಳಸಿಯು ಉದ್ಭವಿಸಿದಳು.



ಪ್ರಾತಃಕಾಲದ ಸ್ನಾನಾನಂತರ ಶ್ರೀಹರಿಯ ಪೂಜೆಗಾಗಿ ತುಳಸಿಯನ್ನು ಬಿಡಿಸಿ ಇಟ್ಟುಕೊಳ್ಳಬೇಕು. ಬಿಡಿಸುವಾಗ 'ತುಲಸಿಯೇ ಅಮೃತ ಕಲಶದಲ್ಲಿ ಉದ್ಭೂತಳಾಗಿರುವ ನೀನು ಕೇಶವನಿಗೆ ಪ್ರಿಯಳಾಗಿರುವಿ. ಅವನ ಪೂಜೆಗಾಗಿ ನಿನ್ನನ್ನು ತೆಗೆದುಕೊಂಡು ಹೋಗುವೆ. ನನ್ನನ್ನು ಕ್ಷಮಿಸು' ಎಂದು ಪ್ರಾರ್ಥಿಸಬೇಕು.

ಒಳ್ಳೆಯ ತುಳಸೀ ಮಂಜರೀ ದಳಗಳಿಂದ ಸಹಿತವಾದ ಮೃದುವಾದ ತುಳಸೀ ದಳಗಳಿಂದ ಶ್ರೀಹರಿಯ ಪೂಜೆಯನ್ನು ಮಾಡುವವರು ಕಲಿಯುಗದಲ್ಲಿ ಕೃತಾರ್ಥರಾಗುವರು.

ತುಳಸೀ ಮತ್ತು ಪುಷ್ಪಗಳನ್ನು ಒಂದೇ ಪಾತ್ರೆಯಲ್ಲಿ ಇರಿಸಕೂಡದು. ಹೂಗಳಿಲ್ಲದಾಗ ಬರೀ ತುಳಸಿಯನ್ನು ಸಮರ್ಪಿಸಬಹುದು.

ತುಳಸೀ ದಳವಿದ್ದರೆ ಸರಿ, ಇಲ್ಲದೇ ಇದ್ದರೆ ಎಲೆ, ಚಿಗುರು, ಕಾಷ್ಠ ಅದೂ ಇಲ್ಲದಿದ್ದರೆ ಮೃತ್ತಿಕೆ, ಅದಿಲ್ಲದಿದ್ದರೆ 'ತುಳಸೀ' ಎಂದು ಸ್ಮರಣೆ ಮಾಡಿ ಪೂಜೆಯನ್ನು ಸಲ್ಲಿಸಬೇಕು. ಒಣಗಿದ ತುಳಸೀ ಇದ್ದರೂ ದೋಷವಿಲ್ಲ. ತುಳಸಿ ನಿರ್ಮಾಲ್ಯವಾದರೂ ಮೂರು ದಿನ ತೊಳೆದು ಏರಿಸಬಹುದು. ಶುದ್ಧೋದಕದಿಂದ ತೊಳೆದು ಶ್ರೀಹರಿಗೆ ಅರ್ಪಿಸಬೇಕು. ಒಟ್ಟಿನಲ್ಲಿ ತುಳಸಿ ಇಲ್ಲದೇ ಪೂಜೆ ಮಾಡಕೂಡದು.

ಶುಕ್ರವಾರ, ಮಂಗಳವಾರ, ವೈದೃತಿ, ವ್ಯತೀಪಾತ ಬಂದಾಗ, ಸೂರ್ಯ ಚಂದ್ರರ ಗ್ರಹಣ ಕಾಲದಲ್ಲಿ, ಪರ್ವಕಾಲ, ಆರಾಧನಾ ದಿವಸಗಳಲ್ಲಿ, ದ್ವಾದಶೀದಿನ,

ಅಮಾವಾಸ್ಯೆ, ಪೂರ್ಣಿಮಾ ದಿನಗಳಲ್ಲಿ, ಶ್ರೇಷ್ಠ ಉಪರಾಗದಲ್ಲಿ, ಪಿತೃಶ್ರಾದ್ಧ ದಿನಗಳಲ್ಲಿ ತುಲಸೀ ಬಿಡಿಸಬಾರದು. ಹೊಸ ಬಟ್ಟೆ ಉಟ್ಟು, ಭೋಜನಾನಂತರ ಹಾಗೂ ತಾಂಬೂಲ ಸೇವನೆ ಮಾಡುತ್ತಾ ತುಲಸಿಯನ್ನು ಮುಟ್ಟಬಾರದು. ಸ್ತ್ರೀಯರಿಂದಾಗಲೀ, ಶೂದ್ರರಿಂದಾಗಲೀ ತುಳಸಿಯನ್ನು ತರಿಸಬಾರದು.

ರಾ ಗ – ನಾ ಟಿ : ತಾ ಳ – ಆ ದಿ ತಾ ಳ

ನಮೋ ನಮೋ ಶ್ರೀ ತುಳಸಿ । ಪಾಹಿ ಪಾಹಿ
ಕುಮತಿಯ ಪರಿಹರಿಸಿ ನೀ ।ಪ।

ಅಮಿತಮಹಿಮೆ ಸದ್ಗುಣಗಣಪೂರ್ಣೇ
ಕಮಲೇಕ್ಷಣ ಮಧುಸೂದನನರಸೀ ।ಅ ಪ।

ಅಂದಿನ ಕಾಲದಲಿ ಹರಿಪದ
ವಂದಿಸಿ ಭಕುತಿಯಲೀ
ಅಂದದಿ ವರ ಪಡೆದಿಂದಿಗು ಸರ್ವರ
ಮಂದಿರದೊಳಗಿಹೆ ಪೂಜೆಯ ಕೇಳುತಲಿ ।೧।

ಧನ್ವಂತರಿ ನಯನಾದಿಂದಿಳಿ
ದೊನಜೆ ಜಲಂಧರನಾ ಲ
ಲನೆಯ ಉದ್ಧರಿಸಿದ ಪಾವನತರೆ
ಎನಗಸದಳ ವರ್ಣಿಪೆ ನಿನ್ನ ಗುಣಾ ।೨।

ನಾ ನಂಬಿದೆ ನಿನ್ನ ದೇವತ
ಮಾನಿನಿ ಮಣಿಯನ್ನ
ಹೀನತೆ ಎಣಿಸದೆ ಕರುಣಿಸಿ ಸರ್ವದ
ಪ್ರಾಣೇಶವಿಟ್ಠಲನ ಧ್ಯಾನದೊಳಿರಿಸೆ ।೩।



ರಾಗ – ಕಲ್ಯಾಣಿ : ತಾಳ – ಛಾಪು ತಾಳ

ಒಲ್ಲನೊ ಕೃಷ್ಣ ಕೊಳ್ಳನೊ ।ಪ।

ಎಲ್ಲ ಸಾಧನವಿದ್ದು ತುಳಸಿ ಇಲ್ಲದ ಪೂಜೆ ।ಅ ಪ।

ಸಿಂಧು ಶತಕೋಟಿ ಗಂಗೋದಕವಿದ್ದು
ಗಂಧ ಸುಪರಿಮಳ ವಸ್ತ್ರವಿದ್ದು
ಚಂದುಳ್ಳ ಆಭರಣ ಧೂಪದೀಪಗಳಿದ್ದು
ಬೃಂದಾವನ ಶ್ರೀ ತುಳಸಿಯಿಲ್ಲದ ಪೂಜೆ ।೧।
ದಧಿ ಕ್ಷೀರ ಮೊದಲಾದ ಅಭಿಷೇಕಗಳಿದ್ದು
ಮಧುಪರ್ಕ ಪಂಚೋಪಚಾರವಿದ್ದು
ಮುದದಿಂದ ಮುದ್ದು ಶ್ರೀ ಕೃಷ್ಣನ ಪೂಜೆಗೆ
ಸದಮಲಳಾದ ಶ್ರೀ ತುಳಸಿಯಿಲ್ಲದ ಪೂಜೆ ।೨।

ಮಂತ್ರ ಮಹಾ ಮಂತ್ರ ಪುರುಷಸೂಕ್ತಗಳಿದ್ದು
ತಂತು ತಪ್ಪದೆ ತಂತ್ರಸಾರವಿದ್ದು
ಸಂತತ ಸುಖಪೂರ್ಣನ ಪೂಜೆಗ
ತ್ಯಂತ ಪ್ರಿಯಳಾದ ತುಳಸಿಯಿಲ್ಲದ ಪೂಜೆ ।೩।

ಕಮಲ ಮಲ್ಲಿಗೆ ಜಾಜಿ ಸಂಪಿಗೆ ಕೇದಿಗೆ
ವಿಮಲ ಘಂಟೆ ಪಂಚ ವಾದ್ಯಗಳಿದ್ದು
ಅಮಲ ಪಂಚಭಕ್ಷ್ಯ ಪರಮಾನ್ನಗಳಿದ್ದು
ಕಮಲನಾಭಗೆ ಪ್ರಿಯ ಶ್ರೀ ತುಳಸಿಯಿಲ್ಲದ ಪೂಜೆ ।೪।

ಪೂಜೆಯ ಮಾಡದೆ ತುಳಸಿಮಂಜರಿಯಿಂದ
ಮೂಜಗದೊಡೆಯ ಮುರಾರಿಯನು
ರಾಜಾಧಿರಾಜಾಯ ಮಂತ್ರ ಪುಷ್ಪಗಳಿಂದ
ಪೂಜಿಸಿದರು ಒಲ್ಲ ಪುರಂದರವಿಟ್ಠಲನು ।೫।